Akashvani : Bengaluru
National Bulletin In Kannada
06.09.2025 : 7.35am

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

*******

**<><*<><>*><>**

<u>ಮುಖ್ಯಾಂಶಗಳು</u>

೧. ಇದೇ ೯ರಿಂದ ಮಾರಿಷಸ್ ಪ್ರಧಾನಿ ಡಾ. ನವೀನ್‌ಚಂದ್ರ ರಾಮಗೂಲಂ ೮ ದಿನಗಳ ಭಾರತ ಭೇಟಿ

೨. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ರಕ್ಷಣಾ ಕಾರ್ಯಚರಣೆಗಾಗಿ ನನ್ನ ಭಾರತ್ ಆಪ್ತಾ ಮಿತ್ರರನ್ನು ಸಜ್ಜುಗೊಳಿಸಲಾಗುವುದು - ಕೇಂದ್ರ ಸಚಿವ ಡಾ. ಮನ್ಸುಖ್ ಮಾಂಡವಿಯಾ

೩. ಭಾರತ ಮತ್ತು ಅಮೆರಿಕ ಎರಡೂ ದೇಶಗಳ ನಡುವಿನ ಸಂಬಂಧದ ಬಗ್ಗೆ ಚಿಂತಿಸಬೇಕಾಗಿಲ್ಲ - ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್

೪. ದಕ್ಷಿಣ ಕೊರಿಯಾದ ಗ್ವಾಂಗ್ಜುವಿನಲ್ಲಿ ಇಂದು ಆರಂಭವಾಗಲಿರುವ ವಿಶ್ವ ಬಿಲ್ಲುಗಾರಿಕೆ ಚಾಂಪಿಯನ್‌ಶಿಪ್‌ನಲ್ಲಿ ಸ್ಪರ್ಧಿಸಲಿರುವ ಭಾರತದ ೧೨ ಸದಸ್ಯರ ತಂಡ

**><><><*><><><**

ಮಾರಿಷಸ್ ಪ್ರಧಾನಿ ಡಾ. ನವೀನ್‌ಚಂದ್ರ ರಾಮಗೂಲಂ ಇದೇ ೯ ರಿಂದ ಭಾರತಕ್ಕೆ ಎಂಟು ದಿನಗಳ ಭೇಟಿ ನೀಡಲಿದ್ದಾರೆ. ತಮ್ಮ ಭೇಟಿಯ ಸಮಯದಲ್ಲಿ, ಪ್ರಧಾನಿ ರಾಮಗೂಲಂ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲಿದ್ದಾರೆ. ಅವರು ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ವರ್ಧಿಸುವ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಚರ್ಚೆ ನಡೆಸಲಿದ್ದಾರೆ. ಡಾ. ರಾಮಗೂಲಂ ಮುಂಬೈ, ವಾರಣಾಸಿ, ಅಯೋಧ್ಯೆ ಮತ್ತು ತಿರುಪತಿಗೆ ಸಹ ಭೇಟಿ ನೀಡಲಿದ್ದಾರೆ. ಈ ಭೇಟಿಯು ಭಾರತ ಮತ್ತು ಮಾರಿಷಸ್ ನಡುವಿನ ಬಲವಾದ ಮತ್ತು ಶಾಶ್ವತವಾದ ಬಾಂಧವ್ಯವನ್ನು ಹೆಚ್ಚಿಸುತ್ತದೆ ಎಂದು ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಇದು ಅವರ ಪ್ರಸ್ತುತ ಅವಧಿಯಲ್ಲಿ ಭಾರತಕ್ಕೆ ಅವರ ಮೊದಲ ವಿದೇಶಿ ದ್ವಿಪಕ್ಷೀಯ ಭೇಟಿಯಾಗಲಿದೆ.

**><><><*><><><**

ಪಂಜಾಬ್ ಮತ್ತು ಹಿಮಾಚಲ ಪ್ರದೇಶದ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ರಕ್ಷಣಾ ಕಾರ್ಯಾಚರಣೆಗಳನ್ನು ಒದಗಿಸಲು ಸಾವಿರ ಕ್ಕೂ ಹೆಚ್ಚು ತರಬೇತಿ ಪಡೆದ ನನ್ನ ಭಾರತ್ ಆಪ್ತಾ ಮಿತ್ರರನ್ನು ಸಜ್ಜುಗೊಳಿಸಲಾಗುವುದು ಎಂದು ಕೇಂದ್ರ ಕ್ರೀಡಾ ಮತ್ತು ಯುವ ವ್ಯವಹಾರಗಳ ಸಚಿವ ಡಾ. ಮನ್ಸುಖ್ ಮಾಂಡವಿಯಾ ಹೇಳಿದ್ದಾರೆ. ನವದೆಹಲಿಯ ನನ್ನ ಭಾರತ್ ಪ್ರಧಾನ ಕಚೇರಿಯಲ್ಲಿ ನಡೆದ ಉನ್ನತ ಮಟ್ಟದ ಸಭೆಯನ್ನುದ್ದೇಶಿಸಿ ಮಾತನಾಡಿದ ಮಾಂಡವಿಯಾ, ನನ್ನ ಭಾರತ್ ಸ್ವಯಂಸೇವಕರು ಮತ್ತು ಜಿಲ್ಲಾ ಯುವ ಅಧಿಕಾರಿಗಳು ಪೀಡಿತ ಸಮುದಾಯಗಳಿಗೆ ಸಕಾಲಿಕ ಪರಿಹಾರವನ್ನು ಒದಗಿಸಲು ಜಿಲ್ಲಾ ಮ್ಯಾಜಿಸ್ಟ್ರೇಟ್‌ಗಳೊಂದಿಗೆ ಸಮನ್ವಯದಿಂದ ಕೆಲಸ ಮಾಡುವಂತೆ ವಿನಂತಿಸಿದರು. ನನ್ನ ಭಾರತ್ ಸ್ವಯಂಸೇವಕ ಮತ್ತು ಅನುಭವಿ ಕಲಿಕೆಯ ಮೂಲಕ ಯುವಜನರನ್ನು ಸಂಪರ್ಕಿಸಲು, ಸಜ್ಜುಗೊಳಿಸಲು ಮತ್ತು ಸಬಲೀಕರಣಗೊಳಿಸಲು ವಿನ್ಯಾಸಗೊಳಿಸಲಾದ ರಾಷ್ಟ್ರವ್ಯಾಪಿ ಭೌತಿಕ ವೇದಿಕೆಯಾಗಿದೆ.

><><><*><><><

ಭಾರತ ಮತ್ತು ಅಮೆರಿಕ ವಿಶೇಷ ಸಂಬಂಧವನ್ನು ಹೊಂದಿವೆ ಮತ್ತು ಎರಡೂ ದೇಶಗಳ ನಡುವಿನ ಸಂಬಂಧಗಳ ಬಗ್ಗೆ ಚಿಂತಿಸಬೇಕಾಗಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ನಿನ್ನೆ ರಾತ್ರಿ ವಾಷಿಂಗ್ಟನ್‌ನಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅಮೆರಿಕ ಅಧ್ಯಕ್ಷರು, ಪ್ರಧಾನಿ ನರೇಂದ್ರ ಮೋದಿ ಒಬ್ಬ ಮಹಾನ್ ಪ್ರಧಾನಿ ಮತ್ತು ಅವರು ಯಾವಾಗಲೂ ಮೋದಿ ಅವರೊಂದಿಗೆ ಸ್ನೇಹಿತರಾಗಿತ್ತೇನೆ ಎಂದು ಹೇಳಿದರು. ಚೀನಾದ ಟಿಯಾಂಜಿನ್‌ನಲ್ಲಿ ನಡೆದ ಶಾಂಘೈ ಸಹಕಾರ ಸಂಘಟನೆಯ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ, ರಷ್ಯಾದ ಅಧ್ಯಕ್ಷ ಪುಟಿನ್ ಮತ್ತು ಚೀನಾದ ನಾಯಕ ಕ್ಸಿ ನಡುವಿನ ಸ್ನೇಹವು ಜಾಗತಿಕ ಗಮನ ಸೆಳೆದ ಕೆಲವು ದಿನಗಳ ನಂತರ ಸಾಮಾಜಿಕ ಮಾಧ್ಯಮದಲ್ಲಿ ಅಮೆರಿಕ ಅಧ್ಯಕ್ಷರ ಈ ಪೋಸ್ಟ್ ಬಂದಿದೆ. ಭಾರತ ಮತ್ತು ಇತರ ದೇಶಗಳೊಂದಿಗೆ ವ್ಯಾಪಾರ ಮಾತುಕತೆಗಳು ಹೇಗೆ ನಡೆಯುತ್ತಿವೆ ಎಂಬ ಪ್ರಶ್ನೆಗೆ, ಟ್ರಂಪ್, "ಅವರೆಲ್ಲರೊಂದಿಗೂ ಉತ್ತಮವಾದ ಸಂಬಂಧವಿರುವುದಾಗಿ ಹೇಳಿದ್ದರು. ಇದಕ್ಕೂ ಮೊದಲು, ಅಮೆರಿಕದ ಅಧ್ಯಕ್ಷರು ಅಮೆರಿಕದ ತಂತ್ರಜ್ಞಾನ ದೈತ್ಯ ಗೂಗಲ್ ಮೇಲೆ ೩.೫ ಬಿಲಿಯನ್ ಡಾಲರ್ ದಂಡ ವಿಧಿಸಿದ್ದಕ್ಕಾಗಿ ಯುರೋಪಿಯನ್ ಒಕ್ಕೂಟವನ್ನು ತೀವ್ರವಾಗಿ ಟೀಕಿಸಿದರು. ಆನ್‌ಲೈನ್ ಜಾಹೀರಾತು ತಂತ್ರಜ್ಞಾನ ವಲಯದಲ್ಲಿನ ಸ್ಪರ್ಧಾತ್ಮಕ ವಿರೋಧಿ ಅಭ್ಯಾಸಗಳಿಗಾಗಿ ಯುರೋಪಿಯನ್ ಆಯೋಗವು ಗೂಗಲ್ ಮೇಲೆ ದಂಡವನ್ನು ಘೋಷಿಸಿದೆ.

><><><*><><><

ಈ ವರ್ಷದ ಮಾರ್ಚ್‌ನಲ್ಲಿ ನಡೆದ ಅಮೃತಸರ ದೇವಸ್ಥಾನದ ಗ್ರೆನೇಡ್ ದಾಳಿಯ ಪ್ರಮುಖ ಆರೋಪಿಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ ಬಂಧಿಸಿದೆ. ಗುರುದಾಸ್ಪುರ ಜಿಲ್ಲೆಯ ಬಟಾಲಾ

ಗ್ರಾಮದ ನಿವಾಸಿ ಶರಣಜಿತ್ ಕುಮಾರ್ ಎಂಬ ಆರೋಪಿಯನ್ನು ಬಿಹಾರದ ಗಯಾದಿಂದ ಬಂಧಿಸಲಾಗಿದೆ. ಎನ್‌ಐಎ ಮೂಲಗಳ ಪ್ರಕಾರ, ಬೈಕ್‌ನಲ್ಲಿ ಬಂದ ಇಬ್ಬರು ದಾಳಿಕೋರರು ನಡೆಸಿದ ಭಯೋತ್ಪಾದಕ ದಾಳಿಯ ಪಿತೂರಿ ಮತ್ತು ಕಾರ್ಯಗತಗೊಳಿಸುವಿಕೆಯಲ್ಲಿ ಬಂಧಿತ ಸಕ್ರಿಯವಾಗಿ ಭಾಗಿಯಾಗಿದ್ದನು. ಯುರೋಪ್, ಅಮೇರಿಕ ಮತ್ತು ಕೆನಡಾದಲ್ಲಿ ಅಂತರರಾಷ್ಟ್ರೀಯ ನಂಟು ಹೊಂದಿರುವ ವಿದೇಶಿ ಮೂಲದ ನಿರ್ವಾಹಕರ ನಿರ್ದೇಶನದಡಿಯಲ್ಲಿ ಅವರು ಕೆಲಸ ಮಾಡುತ್ತಿದ್ದರು. ಈ ಇಬ್ಬರು ಪಂಜಾಬ್‌ನಲ್ಲಿ ಗ್ರೆನೇಡ್‌ಗಳು ಮತ್ತು ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳ ಸರಕುಗಳ ಖರೀದಿ ಹಾಗೂ ಪೂರೈಕೆಯಲ್ಲಿ ಭಾಗಿಯಾಗಿದ್ದರು.

><><><*><><><

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಪ್ರಧಾನಿಗೆ ಪ್ರವಾಹ ಪೀಡಿತ ಪಂಜಾಬ್ ನಲ್ಲಿ ಸಂಭವಿಸಿರುವ ನಷ್ಟದ ವಿವರವಾದ ವರದಿಯನ್ನು ಸಲ್ಲಿಸುವುದಾಗಿ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಚೌಹಾಣ್, ಪ್ರವಾಹ ಪೀಡಿತ ಪ್ರದೇಶಗಳ ಪುನರ್ನಿರ್ಮಾಣಕ್ಕಾಗಿ ಅಲ್ಪ, ಮಧ್ಯಮ ಮತ್ತು ದೀರ್ಘಾವಧಿಯ ಯೋಜನೆಗಳ ಕುರಿತು ಹೇಳಿದ್ದಾರೆ. ಈ ಬಿಕ್ಕಟ್ಟಿನ ಸಮಯದಲ್ಲಿ ಪ್ರವಾಹ ಪೀಡಿತರಿಗೆ ಸಾರ್ವಜನಿಕರು ಮತ್ತು ಸಾಮಾಜಿಕ ಕಾರ್ಯಕರ್ತರು ಒದಗಿಸುತ್ತಿರುವ ಸೇವೆಗಳನ್ನು ಶ್ಲಾಘಿಸಿದ ಅವರು, ಜನರ ಸೇವಾ ಮನೋಭಾವಕ್ಕೆ ವಂದಿಸುತ್ತೇನೆ ಎಂದು ಹೇಳಿದರು. ಈ ಏಕತೆ ಮತ್ತು ಸೇವಾ ಮನೋಭಾವವು ಪ್ರಸ್ತುತ ಬಿಕ್ಕಟ್ಟಿನಿಂದ ಹೊರಬರಲು ನಮಗೆ ಶಕ್ತಿಯನ್ನು ನೀಡುತ್ತದೆ ಎಂದು ಸಚಿವರು ಹೇಳಿದರು. ಕೇಂದ್ರದಿಂದ ರಾಜ್ಯಕ್ಕೆ ಸಂಪೂರ್ಣ ಬೆಂಬಲ ದೊರೆಯುವ ಭರವಸೆಯನ್ನು ಅವರು ನೀಡಿದ್ದಾರೆ. ಪ್ರವಾಹ ಪರಿಸ್ಥಿತಿಯನ್ನು ಅವಲೋಕಿಸಲು ಚೌಹಾಣ್ ಅಮೃತಸರ, ಗುರುದಾಸ್ಪುರ್ ಮತ್ತು ಕಪುರ್ತಲಾದ ಅನೇಕ ಗ್ರಾಮಗಳಿಗೆ ಭೇಟಿ ನೀಡಿದರು.

><><><*><><><

ಇತ್ತೀಚಿನ ಭಾರೀ ಮಳೆ ಮತ್ತು ಭೂಕುಸಿತಗಳಿಂದ ಉಂಟಾದ ಹಾನಿಯನ್ನು ನಿರ್ಣಯಿಸಲು ಅಂತರ-ಸಚಿವಾಲಯ ಕೇಂದ್ರ ತಂಡ ನಿನ್ನೆ ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಗೆ ಭೇಟಿ ನೀಡಿತು. ಸಮುದಾಯ ಆಧಾರಿತ ವಿಪತ್ತು ಸಿದ್ಧತೆಯನ್ನು ಬಲಪಡಿಸಲು ಮತ್ತು ನಿರ್ಣಾಯಕ ಮೂಲಸೌಕರ್ಯಗಳ ಪುನಃಸ್ಥಾಪನೆಗೆ ಆದ್ಯತೆ ನೀಡಲು ಕೇಂದ್ರ ತಂಡ ಸೂಚಿಸಿತು. ಈ ತಂಡದ ನೇತೃತ್ವವನ್ನು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಜಂಟಿ ಕಾರ್ಯದರ್ಶಿ ಕರ್ನಲ್ ಕೀರ್ತಿ ಪ್ರತಾಪ್ ಸಿಂಗ್ ವಹಿಸಿದ್ದರು. ತಂಡವು ನಿನ್ನೆ ಉಧಂಪುರ ಮತ್ತು ರಿಯಾಸಿ ಜಿಲ್ಲೆಗೆ ಭೇಟಿ ನೀಡಿತು. ತಂಡವು ಡೊಮೆಲ್-ಕತ್ರಾ ಹೆದ್ದಾರಿ, ಭೂಕುಸಿತದಿಂದ ಹಾನಿಗೊಳಗಾದ ಬಲ್ಲಾನಿ ಸೇತುವೆ ಮತ್ತು ಕತ್ರಾದ ಶನಿ ದೇವಾಲಯದ ಬಳಿಯ ಸ್ಲೈಡ್ ಸೈಟ್ ಸೇರಿದಂತೆ ಹಲವಾರು ಪೀಡಿತ ಸ್ಥಳಗಳನ್ನು ಪರಿಶೀಲಿಸಿತು. ಬೆಳೆ ನಷ್ಟವನ್ನು ಪರಿಶೀಲಿಸಲು ತಂಡವು ಕೃಷಿ ಕ್ಷೇತ್ರಗಳಿಗೆ ಭೇಟಿ ನೀಡಿತು ಮತ್ತು

ರೈತರೊಂದಿಗೆ ಸಂವಹನ ನಡೆಸಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತಂಡವು ಕತ್ರಾದ ಆಧ್ಯಾತ್ಮಿಕ ಬೆಳವಣಿಗೆ ಕೇಂದ್ರದಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿತು.

><><><*><><><

ಜಮ್ಮು ಮತ್ತು ಕಾಶ್ಮೀರದಲ್ಲಿ, ಉಧಮ್‌ಪುರ ಜಿಲ್ಲೆಯ ಪ್ರವಾಹ ಪೀಡಿತ ದಮ್‌ಮೋಟೆ ಪಂಚಾಯತ್‌ನ ಜನರಿಗೆ ಭಾರತೀಯ ವಾಯುಪಡೆಯ ಹೆಲಿಕಾಪ್ಟರ್‌ಗಳು ನಿನ್ನೆ ಸುಮಾರು ಆರು ಟನ್ ಪರಿಹಾರ ಸಾಮಗ್ರಿಗಳನ್ನು ತಲುಪಿಸಿವೆ. ದಮ್‌ಮೋಟೆ ಪಂಚಾಯತ್‌ನಲ್ಲಿರುವ ಶಾಲೆಯ ಛಾವಣಿಯ ಮೇಲೆ ೫.೯ ಟನ್ ಪರಿಹಾರ ಸಾಮಗ್ರಿಗಳನ್ನು ಐಎಎಫ್ ಪೈಲಟ್‌ಗಳು ಹೆಲಿಕಾಪ್ಟರ್ ಕಾರ್ಯಾಚರಣೆಗಳನ್ನು ನಿರ್ವಹಿಸಿದ್ದಾರೆ ಎಂದು ರಕ್ಷಣಾ ಸಾರ್ವಜನಿಕ ಸಂಪರ್ಕ ಅಧಿಕಾರಿಯೊಬ್ಬರು ಜಮ್ಮುವಿನಲ್ಲಿ ತಿಳಿಸಿದ್ದಾರೆ. ಭಾರೀ ಮಳೆ, ಹಠಾತ್ ಪ್ರವಾಹ ಮತ್ತು ಭೂಕುಸಿತಗಳಿಂದಾಗಿ ಉಧಮ್‌ಪುರದಲ್ಲಿ ಜನಜೀವನವ ಅಸ್ತವ್ಯಸ್ತಗೊಂಡಿದೆ.

><><><*><><><

ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ .ಪಂಜಾಬ್ ಮತ್ತು ಉತ್ತರ ಭಾರತದ ಪ್ರವಾಹ ಪೀಡಿತ ಪ್ರದೇಶಗಳಿಗೆ ವೈದ್ಯಕೀಯ ಪರಿಹಾರ ಮತ್ತು ಮಾನವೀಯ ಬೆಂಬಲವನ್ನು ವಿಸ್ತರಿಸಲು ವೈದ್ಯರು ಮತ್ತು ದಾದಿಯರ ತಂಡವನ್ನು ನಿಯೋಜಿಸಿದೆ.  ತಂಡವು ಔಷಧ, ಮನೋವೈದ್ಯಶಾಸ್ತ್ರ, ಮಕ್ಕಳ ಚಿಕಿತ್ಸೆ, ಶಸ್ತ್ರಚಿಕಿತ್ಸೆ, ಸ್ತ್ರೀರೋಗ ಶಾಸ್ತ್ರ ಮತ್ತು ರೇಡಿಯೋ ರೋಗನಿರ್ಣಯ ಮತ್ತು ಇತರ ವಿವಿಧ ವಿಭಾಗಗಳಲ್ಲಿ ಪರಿಣತಿ ಹೊಂದಿರುವ ೧೧ ವೈದ್ಯರು ಮತ್ತು ೧೧ ದಾದಿಯರನ್ನು ಒಳಗೊಂಡಿರುತ್ತದೆ. ಆರೋಗ್ಯ ವೃತ್ತಿಪರರು ಅಗತ್ಯ ವೈದ್ಯಕೀಯ ಆರೈಕೆಯನ್ನು ಒದಗಿಸಲು, ಔಷಧಿಗಳನ್ನು ವಿತರಿಸಲು ಮತ್ತು ಪೀಡಿತ ಸಮುದಾಯಗಳನ್ನು ಬೆಂಬಲಿಸಲು ಕೆಲಸ ಮಾಡುತ್ತಾರೆ ತಂಡವು ಪ್ರವಾಹ ಪೀಡಿತ ಜನರಿಗೆ ತಕ್ಷಣದ ಸಹಾಯವನ್ನು ನೀಡುತ್ತದೆ ಮತ್ತು ಯಾವುದೇ ಆರೋಗ್ಯ ಸಮಸ್ಯೆಗಳನ್ನು ಪರಿಹರಿಸಲು ಉತ್ತಮ ತರಬೇತಿ ಪಡೆದಿದೆ ಮತ್ತು ಸಜ್ಜಾಗಿದೆ ಎಂದು ಎಂದು ಎಐಎಂಎಸ್ ತಿಳಿಸಿದೆ.

><><><*><><><

ಭಾರತದ ೧೨ ಸದಸ್ಯರ ಬಿಲ್ಲುಗಾರಿಕೆ ತಂಡವು ದಕ್ಷಿಣ ಕೊರಿಯಾದ ಗ್ವಾಂಗ್ಜುವಿನಲ್ಲಿ ಇಂದು ಆರಂಭವಾಗಲಿರುವ ವಿಶ್ವ ಬಿಲ್ಲುಗಾರಿಕೆ ಚಾಂಪಿಯನ್‌ಶಿಪ್‌ನಲ್ಲಿ ಸ್ಪರ್ಧಿಸಲಿದೆ. ಹಿಂದಿನ ಆವೃತ್ತಿಯಲ್ಲಿ ಮೂರು ಚಿನ್ನದ ಪದಕಗಳು ಮತ್ತು ಒಂದು ಕಂಚಿನೊಂದಿಗೆ ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದ ನಂತರ, ಭಾರತವು ಆ ಯಶಸ್ಸನ್ನು ಪುನರಾವರ್ತಿಸುವ ಗುರಿಯನ್ನು ಹೊಂದಿದೆ.

ಪುರುಷರ ರಿಕರ್ವ್ ತಂಡದಲ್ಲಿ ಧೀರಜ್ ನೀರಜ್ ಚೌಹಾಣ್ ಮತ್ತು ರಾಹುಲ್ ಜೊತೆಗೆ ಭಾಗವಹಿಸಲಿದ್ದಾರೆ, ವರ್ಷದ ಗಾಥಾ ಖಡಕೆ ದೀಪಿಕಾ ಕುಮಾರಿ ಮತ್ತು ಅಂಕಿತಾ ಭಕತ್ ಅವರೊಂದಿಗೆ ಮಹಿಳಾ ರಿಕರ್ವ್ ತಂಡದಲ್ಲಿ ಸ್ಥಾನ ಪಡೆಯಲಿದ್ದಾರೆ. ಪುರುಷರ ಸಂಯುಕ್ತ ತಂಡದಲ್ಲಿ ಪ್ರಥಮೇಶ್ ಫ್ಯೂಗೆ, ಅಮನ್ ಸೈನಿ ಮತ್ತು ರಿಷಭ್ ಯಾದವ್ ಇದ್ದಾರೆ, ಆದರೆ ಮಹಿಳಾ ತಂಡದಲ್ಲಿ ಜ್ಯೋತಿ ಸುರೇಖಾ ವೆನ್ನಮ್, ಪರ್ನೀತ್ ಕೌರ್ ಮತ್ತು ಪ್ರೀತಿಕಾ ಪ್ರದೀಪ್ ಇದ್ದಾರೆ.

><><><*><><><

ಬಿಹಾರದ ರಾಜ್‌ಗಿರ್‌ನಲ್ಲಿ ಪುರುಷರ ಏಷ್ಯಾ ಕಪ್ ಹಾಕಿಯ ಸೂಪರ್ ಫೋರ್ ಹಂತದ ಪುರುಷರ ಪಂದ್ಯದಲ್ಲಿ ಭಾರತ ಇಂದು ಚೀನಾವನ್ನು ಎದುರಿಸಲಿದೆ. ಈ ಪಂದ್ಯವು ಸಂಜೆ ೭:೩೦ ಕ್ಕೆ ರಾಜ್‌ಗಿರ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿದೆ. ಒಂದು ಗೆಲುವು ಮತ್ತು ಒಂದು ಡ್ರಾದೊಂದಿಗೆ, ಭಾರತ ತಂಡವು ಸೂಪರ್ ಫೋರ್ ಹಂತದ ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕು ಅಂಕಗಳನ್ನು ಗಳಿಸಿ ಅಗ್ರಸ್ಥಾನದಲ್ಲಿದೆ. ಭಾರತ ತಂಡವು ಟೂರ್ನಿಯಾದ್ಯಂತ ಅಜೇಯವಾಗಿ ಮುಂದುವರೆದಿದ್ದು, ಈ ಬಾರಿ ಏಷ್ಯಾ ಕಪ್ ಪ್ರಶಸ್ತಿಗಾಗಿ ಪ್ರಬಲ ಸ್ಪರ್ಧಿಯಾಗಿದೆ. ಗುರುವಾರ, ಭಾರತ ತಂಡವು ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಮಲೇಷ್ಯಾವನ್ನು ೪-೧ ಅಂತರದಿಂದ ಸೋಲಿಸಿತು. ಮತ್ತೊಂದು ಸೂಪರ್ ಫೋರ್ ಹಂತದ ಪಂದ್ಯದಲ್ಲಿ, ಕೊರಿಯಾ ಇಂದು ಸಂಜೆ ೫ ಗಂಟೆಗೆ ಮಲೇಷ್ಯಾವನ್ನು ಎದುರಿಸಲಿದೆ. ಏತನ್ಮಧ್ಯೆ, ೫ ರಿಂದ ೮ ನೇ ಸ್ಥಾನಕ್ಕಾಗಿ ನಡೆಯುವ ವರ್ಗೀಕರಣ ಪಂದ್ಯಗಳಲ್ಲಿ, ಚೈನೀಸ್ ತೈಪೆ ಇಂದು ಮಧ್ಯಾಹ್ನ ಕಝಾಕಿಸ್ತಾನ್ ಅನ್ನು ಎದುರಿಸಲಿದೆ.

><><><*><><><